**ದಿನಾಂಕ: 02.04.2025 ರಂದು ಸಾಕ್ಷಿದಾರರನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ ಆರೋಪಿ ಪರ ಶ್ರೀ.ಎಸ್ ಎಂ ಹೆಚ್ ವಕೀಲರಿಂದಃ**

4. ನಾನು 2023 ರಂದು ರೂ.2 ಸಾವಿರ ಅಡಿಕೆ ಪ್ಲೇಟಗಳನ್ನು ಆರೋಪಿಯಿಂದ ಖರೀದಿಸಿದ್ದೇನು. ಈ ಬಗ್ಗೆ ನಾನು ಆರೋಪಿಗೆ ಬಿಲ್ಲುಗಳನ್ನು ಕೊಟ್ಟಿರುವುದಿಲ್ಲ. ಆ ಒಂದು ಅಡಿಕೆ ಪ್ಲೇಟನ ಬೆಲೆ ರೂ.4 ಆಗಿರುತ್ತದೆ. ನಾನು ಹಾಜರು ಪಡಿಸಿರುವ ಚೆಕ್ ನ ಮೇಲೆ ಇರುವ ಸಹಿ ಮತ್ತು ಅಂಚೆ ಸ್ವೀಕೃತಿ ಪತ್ರದಲ್ಲಿರುವ ಆರೋಪಿ ಸಹಿ ಬೇರೆ ಬೇರೆ ಇದೆ ಎಂದರೆ ಸರಿ. ಅದೇ ರೀತಿ ಆರೋಪಿ ವಕಾಲತ್ ನಲ್ಲಿ ಇರುವ ಸಹಿ ಮತ್ತು ಅಂಚೆ ಸ್ವೀಕೃತಿ ಪತ್ರದಲ್ಲಿರುವ ಸಹಿ ಒಂದೇ ಆಗಿರುತ್ತದೆ ಎಂದರೆ ಸರಿ. ಈಗ ತೋರುತ್ತಿರುವ ಪಡಿತರ ಚೀಟಿ ಆರೋಪಿಗೆ ಸಂಬಂಧಿದ್ದು ಅದು ನಿಡಿ–1 ಎಂದು ಗುರುಸಲಾಯಿತು. ಅದರಲ್ಲಿರುವ ವಿಳಾಸ ವಿನಾಯಕ ನಗರ ಪಾರ್ವತಿ ನರ್ಸಿಂಗ್ ಹೋಮ್ ಎದುರುಗಡೆ ಶಿವಮೊಗ್ಗ ಎಂದು ನಮೂದು ಆಗಿದೆ ಎಂದರೆ ಸರಿ. ಅದೇ ರೀತಿ ಈಗ ತೋರುತ್ತಿರುವ ಚುನಾವಣಾ ಗುರುತಿನ ಚೀಟಿ ಆರೋಪಿಗೆ ಸಂಬಂಧಿಸಿದ್ದು ಎಂದರೆ ಸರಿ ಅದನ್ನು ನಿಡಿ–2 ಎಂದು ಗುರುತಿಸಲಾಯಿತು. ಅದರಲ್ಲಿಯೂ ಸಹ ಆರೋಪಿಯ ವಿಳಾಸ ವಿನಾಯಕ ನಗರ ಪಾರ್ವತಿ ನರ್ಸಿಂಗ್ ಹೋಮ್ ಎದುರುಗಡೆ ಶಿವಮೊಗ್ಗ ಎಂದು ನಮೂದು ಆಗಿದೆ ಎಂದರೆ ಸರಿ.ಆರೋಪಿ ಎಂದೂ ಸಹ ಶಿರಸಿ ತಾಲೂಕಿನ ಮಾಳಂಜಿ ಗ್ರಾಮದಲ್ಲಿ ವಾಸವಾಗಿರುವುದಿಲ್ಲ ಎಂದರೆ ಸರಿಯಲ್ಲ. ನನ್ನ ಸ್ನೇಹಿತ ರವಿ ಮತ್ತು ಆರೋಪಿಗೂ ಪರಸ್ಪರ ವೈಮನಸ್ಸು ಇದೆ ಎಂದರೆ ನನಗೆ ಗೊತ್ತಿಲ್ಲ. ನಿಪಿ–1 ರ ಚೆಕ್ ಆರೋಪಿಯ ಖಾತೆಗೆ ಸಂಬಂಧಿಸಿದ್ದಲ್ಲ ಎಂದರೆ ಸರಿಯಲ್ಲ. ನಾನು ಮತ್ತು ನನ್ನ ಸ್ನೇಹಿತ ರವಿಯವರು ಕೂಡಿಕೊಂಡು ಆರೋಪಿಗೆ ತೊಂದರೆ ಕೊಡುವ ಉದ್ದೇಶದಿಂದ ಬೇರೆಯವರ ಚೆಕ್ ನ ಆಧಾರದ ಮೇಲೆ ಈ ಸುಳ್ಳು ಪ್ರಕರಣ ದಾಖಲಿಸಿದ್ದೇವೆ ಎಂದರೆ ಸರಿಯಲ್ಲ. ನಾನು ಅಂಚೆ ಇಲಾಖೆಯವರ ಜೊತೆ ಮೀಲಾಪೆಯಾಗಿ ಆರೋಪಿಯ ವಿಳಾಸಕ್ಕೆ ನೋಟಿಸು ಕಳುಹಿಸದೇ ಬೇರೆ ವಿಳಾಸಕ್ಕೆ ನೋಟಿಸು ಕಳುಹಿಸಿ ಅಂಚೆ ಸ್ವೀಕೃತಿ ಪತ್ರದ ಮೇಲೆ ರೋಪಿಯ ಸಹಿಯನ್ನು ಸೃಷ್ಟಿಸಿಕೊಂಡಿದ್ದೇವೆ ಎಂದರೆ ಸರಿಯಲ್ಲ. ಆ ಕಾರಣ ಅಂಚೆ ಸ್ವೀಕೃತಿ ಪತ್ರದಲ್ಲಿರುವ ಸಹಿ ಆರೋಪಿಯದ್ದಲ್ಲ ಎಂದರೆ ಸರಿಯಲ್ಲ. ನಮ್ಮ ಕುಟುಂಬದಲ್ಲಿ ಒಟ್ಟು 6 ಜನ ವಾಸವಾಗಿರುತ್ತೇವೆ. ನಮ್ಮ ಕುಟುಂಬಕ್ಕೆ ತಿಂಗಳಿಗೆ ಸುಮಾರು 2 ರಿಂದ 3 ಸಾವಿರ ಖರ್ಚಾಗುತ್ತದೆ. ನಮ್ಮ ಕುಟುಂಬಕ್ಕೆ ಬಿ ಪಿ ಎಲ್ ಪಡಿತರ ಚೀಟಿ ಇದೆ.

5. ಆ ಪಡಿತರ ಚೀಟಿಯನ್ನು ಕಡು ಬಡತನ ಇರುವ ಕುಟುಂಬದವರಿಗೆ ನೀಡುತ್ತಾರೆ ಎಂದರೆ ಸರಿ. ನಮ್ಮ ಕುಟುಂಬ ಪಡಿತರ ಚೀಟಿ ಹೊಂದಿರುವದರಿಂದ ಆರೋಪಿಗೆ ಸಾಲ ಕೊಡಮಷ್ಟು ಸಾಮರ್ಥ್ಯ ಇರುವುದಿಲ್ಲ ಎಂದರೆ ಸರಿಯಲ್ಲ. ಆರೋಪಿಯ ಕುಟುಂಬದಲ್ಲಿ ಆರೋಪಿ ಆತನ ಹೆಂಡತಿ ಮತ್ತು ಒಂದು ಮಗು ವಾಸವಾಗಿರುತ್ತಾರೆ. ಆರೋಪಿ ಆರ್ಥಿಕವಾಗಿ ಸದೃಢನಾಗಿರುವುದರಿಂದ ನನ್ನಿಂದ ಹಣ ಪಡೆಯುವ ಅವಶ್ಯಕತೆ ಇರುವುದಿಲ್ಲ ಎಂದರೆ ಸರಿಯಲ್ಲ. ನನ್ನ ಸ್ನೇಹಿತ ರವಿಯವರು ಈ ಆರೋಪಿಗೆ ಸಂಬಂಧ ಪಡದೇ ಇರುವ ಚೆಕ್ ನ್ನು ನನಗೆ ನೀಡಿ ಈ ಸುಳ್ಳು ಪ್ರಕರಣ ದಾಖಲಿಸಿರುತ್ತಾರೆ ಎಂದರೆ ಸರಿಯಲ್ಲ. ಈ ವಿಚಾರ ನನಗೆ ಮತ್ತು ನನ್ನ ಸ್ನೇಹಿತ ರವಿಯವರಿಗೆ ಗೊತ್ತಿದ್ದರೂ ಸಹ ಈ ಬಗ್ಗೆ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿ ನನಗೆ ಪರಿಚಯಸ್ಥನಿದ್ದು ಅಡಿಕೆ ಪ್ಲೇಟ ವ್ಯಾಪಾರ ಮಾಡುತ್ತಾನೆಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿ ತನ್ನ ವ್ಯಾಪಾರದ ಅಭಿವೃದ್ದಿಗಾಗಿ ನನ್ನಿಂದ ಹಣ ಪಡೆದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆ ಹಣವನ್ನು ವಾಪಸ್ಸು ಕೇಳಿದ ಸಂದರ್ಭದಲ್ಲಿ ಚೆಕ್ ಕೊಟ್ಟರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಮತ್ತು ಆರೋಪಿಯ ನಡುವೆ ಯಾವುದೇ ಹಣಕಾಸಿನ ವ್ಯವಹಾರ ಆಗಿರುವುದಿಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ನ. ಸ. ಓ. ಹೇ. ಕೆ ಸರಿ ಇದೆ
ಎಂದು ಒಪ್ಪಿರುತ್ತಾರೆ.

Sd/-

ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ, ಹಾನಗಲ್

ಸಾಕ್ಷಿಧಾರರ ಸಹಿ